**2 ನೇ  ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯ,  ಕಡೂರು**

ಅಸಲು ದಾವಾ ಸಂ.  294/2015.

P.W.-1.

ದಿನಾಂಕಃ18-09-2021  ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲು : ಪ್ರತಿವಾದಿ ಪರ ಪರ ಶ್ರೀ ಬಿ ಆರ್ ವಕೀಲರಿಂದಃ-**

ನಿ ಪಿ 1 ವಂಶವೃಕ್ಷವನ್ನು ನನ್ನ ತಂದೆ ಮಾಡಿಸಿಕೊಟ್ಟಿರುತ್ತಾರೆ ಎಂದರೆ ಸರಿ. ನನ್ನ ತಂದೆಗೆ ಒಬ್ಬಳೆ ಹೆಂಡತಿ ಇರುತ್ತಾರೆ. ನನ್ನ ತಂದೆಗೆ ಗಂಗಮ್ಮ ಎಂಬ ಮೊದಲನೇ ಹೆಂಡತಿ ಇದ್ದು ಅವರಿಗೆ ಯಶೋಧಮ್ಮ ಎಂಬ ಮಗಳು ಇದ್ದು ಅವಳನ್ನು ಚೋಮನಹಳ್ಳಿ ಗೆ ಮದುವೆ ಮಾಡಿಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಗಂಗಮ್ಮ ಮತ್ತು ಆಕೆಯ ಮಗಳನ್ನು ಉದ್ದೇಶ ಪೂರ್ವಕವಾಗಿ ನಿ ಪಿ 1 ವಂಶವೃಕ್ಷದಲ್ಲಿ ಬರೆಸಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ತಾಯಿಯನ್ನು ನನ್ನ ತಂದೆ ಮದುವೆಯಾದಾಗ ಮೊದಲನೇ ಹೆಂಡತಿಯಾದ ಗಂಗಮ್ಮ ರವರು ಬದುಕಿದ್ದರು ಎಂದರೆ ಸರಿಯಲ್ಲ. ಮೊದಲನೇ ಹೆಂಡತಿಯಾದ ಗಂಗಮ್ಮ ರವರು ಬದುಕಿದ್ದಾಗ ಅವರ ಒಪ್ಪಿಗೆ ಇಲ್ಲದೆ ನನ್ನ ತಂದೆ 2 ನೇ ಮದುವೆ ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಚಂದ್ರಪ್ಪ ರವರಿಗೆ ಇಬ್ಬರು ಮಕ್ಕಳು ಇರುತ್ತಾರೆ ಎಂದರೆ ಸರಿ, ಅವರುಗಳು ತನುಜ ಮತ್ತು ಚಂದು. ಸದರಿ ಚಂದು

ರವರು ಕಳೆದ 6-7 ವರ್ಷದಿಂದ ಪೊಲೀಸ್ ಇಲಾಖೆಯಲ್ಲಿ ಚಿಕ್ಕಮಗಳೂರಿನಲ್ಲಿ ಕೆಲಸ ಮಾಡುತ್ತಿದ್ದಾರೆ ಎಂದರೆ ನನಗೆ ಗೊತ್ತಿಲ್ಲ.

ನನ್ನ ತಂದೆ 2 ನೇ ಪ್ರತಿವಾದಿಯಾದ ತಿಮ್ಮಪ್ಪನಿಗೆ ಚಿಕ್ಕಪ್ಪನಾಗಬೇಕು ಎಂದರೆ ಸರಿ. ತಿಮ್ಮಪ್ಪನಿಗೆ ಇಬ್ಬರು ಹೆಣ್ಣುಮಕ್ಕಳು ಇರುವ ಬಗ್ಗೆ ನನಗೆ ಗೊತ್ತು. ಸದರಿ ತಿಮ್ಮಪ್ಪನನ್ನು ತಿಮ್ಮಾನಾಯಕ ಎಂದು ಸಹಃ ಕರೆಯುತ್ತಾರೆ ಎಂದರೆ ಸರಿ. ಗೋವಿಂದಪ್ಪ ರವರಿಗೆ ಮಂಜೂರಾದ ಆಸ್ತಿ ಯಾವುದು ಎಂದು ನನಗೆ ಗೊತ್ತು. 4 ಎಕರೆ ಜಮೀನು ನಮ್ಮ ತಂದೆ ಮತ್ತು ಅವರ ಕುಟುಂಬದವರು ಒಟ್ಟಿಗೆ ಇದ್ದಾಗ ಗೋವಿಂದಪ್ಪರವರಿಗೆ ಮಂಜೂರಾಗಿರುತ್ತದೆ. ಗೋವಿಂದಪ್ಪರವರ ಮರಣದ ನಂತರ ದಾವಾ ಅನುಸೂಚಿ 3 ರ ಆಸ್ತಿಯ ಖಾತೆಯು ಅವರ ಮಕ್ಕಳಿಗೆ 1985 ರಲ್ಲಿ ಜಂಟಿಯಾಗಿ ಬಂದಿರುತ್ತದೆ ಎಂದರೆ ಸರಿ. ಸದರಿ ಆಸ್ತಿಯಲ್ಲಿ ತಿಮ್ಮಪ್ಪ, ಮಲ್ಲಿಕಾರ್ಜುನ ಮತ್ತು ಚಂದ್ರಪ್ಪ ರವರು ತಲಾ 1 ಎಕರೆ 23 ಗುಂಟೆಯಂತೆ ಉಳುಮೆ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. ದಾವಾ ಅನುಸೂಚಿ 3 ರ ಆಸ್ತಿಯು ಗೋವಿಂದಪ್ಪರಿಗೆ ಯಾವಾಗ ಮಂಜೂರಾಗಿದೆ ಎಂದು ನನಗೆ ನೆನಪಿಲ್ಲ. ಅದೇರೀತಿ ಗೋವಿಂದಪ್ಪರ ಮಕ್ಕಳ ಹೆಸರಿಗೆ ಯಾವಾಗ ಖಾತೆ ಬಂದಿರುತ್ತದೆ ಎಂದು ನನಗೆ ಗೊತ್ತಿಲ್ಲ. ದಾವಾ ಅನುಸೂಚಿ 1 ಮತ್ತು 2 ರ ಆಸ್ತಿಯ ಖಾತೆ ತಿಮ್ಮಪ್ಪ ರವರ ಹೆಸರಿನಲ್ಲಿ ಇದೆ. ಅನುಸೂಚಿ ಸ್ವತ್ತು 1 ಮತ್ತು 2 ರ ಆಸ್ತಿಯ ಖಾತೆ ತಿಮ್ಮಪ್ಪ ರವರ ಹೆಸರಿಗೆ ಯಾವ ಆಧಾರದ ಮೇಲೆ ಬಂದಿರುತ್ತದೆ ಎಂದು ನನಗೆ ಗೊತ್ತಿಲ್ಲ. ದಾವಾ ಅನುಸೂಚಿ 1 ಮತ್ತು 2 ರ ಆಸ್ತಿಯ ಕುರಿತು ದಿನಾಂಕ 13.2.1978 ರಲ್ಲಿ ರೂ.1,000/- ಹಣವನ್ನು ನಗಧು ರೂಪದಲ್ಲಿ ನನ್ನ ತಂದೆಯು ಗೊವೀಂದ ರವರ ಮಗನಾದ 2 ನೇ ಪ್ರತಿವಾದಿಯಿಂದ ಪಡೆದುಕೊಂಡು ನೊಂದಣಿ ಹಕ್ಕು ಖುಲಾಸೆ ಪತ್ರದ ಮೂಲಕ ನೀಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಹಕ್ಕು ಖುಲಾಸೆ ಪತ್ರದಲ್ಲಿ ನನ್ನ ತಂದೆ ನನಗಾಗಲೀ ಅಥವಾ ನನ್ನ ಮಕ್ಕಳಿಗಾಗಲೀ ಯಾವುದೇ ಹಕ್ಕು ಇಲ್ಲ ಎಂದು ಬರೆದುಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಹಕ್ಕು ಖುಲಾಸೆ ಪತ್ರದ ಮೂಲಕ ನನ್ನ ತಂದೆ ತನ್ನ ಪಾಲಿನ ಅರ್ಧ ಹಿಸ್ಸೆಯ ಆಸ್ತಿಯ ಬದಲು ಹಣವನ್ನು ಪಡೆದಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಹಕ್ಕು ಖುಲಾಸೆ ಪತ್ರದಲ್ಲಿ ದಾವಾ ಅನುಸೂಚಿ 1 ಮತ್ತು 2 ರ ಆಸ್ತಿಗಳು ಮಾತ್ರ ಗೋವಿಂದಪ್ಪ ಮತ್ತು ನನ್ನ ತಂದೆಯ ಒಟ್ಟು ಕುಟುಂಬದ ಆಸ್ತಿಗಳು ಎಂದು ನಮೂದಿಸಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಹಕ್ಕು ಖುಲಾಸೆ ಪತ್ರದ ಆಧಾರದ ಮೇಲೆ ದಾವಾ ಅನುಸೂಚಿ 1 ಮತ್ತು 2 ರ ಆಸ್ತಿಗಳ ಖಾತೆ 2 ನೇ ಪ್ರತಿವಾದಿಯ ಹೆಸರಿಗೆ ಎಂ.ಆರ್.ಸಂ.33/1977-78 ರಂತೆ ಬಂದಿರುತ್ತದೆ ಎಂದರೆ ಸರಿಯಲ್ಲ. ನಂತರ ಸುಮಾರು 50 ವರ್ಷಗಳ ಹಿಂದಿನಿಂದಲೂ 2 ನೇ ಪ್ರತಿವಾದಿಯಾದ ತಿಮ್ಮಪ್ಪ ರವರ ಹೆಸರಿನಲ್ಲಿ ಖಾತೆ ಮುಂದುವೆಯುತ್ತಾ ಬಂದಿರುತ್ತದೆ ಎಂದರೆ ಸರಿಯಲ್ಲ. 2 ನೇ ಪ್ರತಿವಾದಿಯು ದಾವಾ

ಅನುಸೂಚಿ 1 ಮತ್ತು 2 ರ ಆಸ್ತಿಗಳನ್ನು ಆಧಾರ ಮಾಡಿ ಸಾಲ ಪಡೆದಿರುವ ವಿಚಾರ ನನಗೆ ಗೊತ್ತಿಲ್ಲ. ನನ್ನ ತಂದೆ ದಾವಾ ಆಸ್ತಿಗಳಿಗೆ ಬಂದು-ಹೋಗುವುದನ್ನು ಮಾಡುತ್ತಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ತಿಮ್ಮಪ್ಪರವರ ಹೆಸರಿನಲ್ಲಿ ಅನುಸೂಚಿ 1 ಮತ್ತು 2 ರ ಆಸ್ತಿಗಳ ಖಾತೆ ಇರುವುದನ್ನು ನೀವಾಗಲೀ ಅಥವಾ ನಿಮ್ಮ ತಂದೆಯವರಾಗಲೀ ಪ್ರಶ್ನಿಸಿದ್ದೀರಾ ಎಂದರೆ ಸಾಕ್ಷಿಯು ನನ್ನ ತಂದೆ ಅವಿಧ್ಯಾವಂತರಾಗಿರುವುದರಿಂದ ತಂದೆಯವರಿಗೆ ತಿಳಿದಿರಲಿಲ್ಲ, ನಾನು ಈ ಕುರಿತು ಸಖರಾಯಪಟ್ಟಣ ನಾಡ ಕಛೇರಿಯಲ್ಲಿ ಪ್ರಶ್ನಿಸಿರುತ್ತೇನೆ. ಯಾವಾಗ ಪ್ರಶ್ನಿಸಿರುತ್ತೇನೆ ಎಂದು ನನಗೆ ಇಸವಿ ನೆನಪಿಲ್ಲ. ಈ ಕುರಿತು ದಾಖಲೆಯನ್ನು ನಾನು ಕೊಟ್ಟಿರುತ್ತೇನೆ. ನಾನು ತಿಮ್ಮಪ್ಪರವರ ಹೆಸರಿನಲ್ಲಿ ಖಾತೆ ಆಗಿರುವುದನ್ನು ಪ್ರಶ್ನಿಸಿರದಿದ್ದರು ಕೂಡ ಪ್ರಶ್ನಿಸಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ತಂದೆ ಸಹಿ ಮಾಡುತ್ತಾರೆ. ಸಾಕ್ಷಿ ಮುಂದುವರೆದು ಸದರಿ ಸಹಿ ಮಾಡುವುದನ್ನು ನಾನೇ ನನ್ನ ತಂದೆಗೆ ಕಲಿಸಿರುತ್ತೇನೆ ಎಂದು ಹೇಳುತ್ತಾರೆ. ಹಕ್ಕು ಖುಲಾಸೆ ಪತ್ರಕ್ಕೆ ನನ್ನ ತಂದೆ ಸಹಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಾನು ನನ್ನ ತಂದೆಗೆ ಸಹಿ ಮಾಡಲು ಯಾವ ವರ್ಷದಲ್ಲಿ ಕಲಿಸಿರುತ್ತೇನೆ ಎಂಬುದು ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರೆದು ನಮ್ಮ ತಂದೆಗೆ ಮೊದಲು ಸಹಃ ಸಹಿ ಮಾಡಲು ಬರುತ್ತಿತ್ತು ಎಂದು ಹೇಳುತ್ತಾರೆ. ನನಗೆ ಹಕ್ಕು ಖುಲಾಸೆ ಪತ್ರ ತೋರಿಸಿದ ಮೇಲೆ ತಂದೆಗೆ ಸಹಿ ಮಾಡಲು ಬರುತ್ತಿತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ತಿಮ್ಮಪ್ಪರವರು ದಾವಾ ಆಸ್ತಿಗಳನ್ನು ಆಧಾರ ಮಾಡಿ ಯಾವಾಗ ಬ್ಯಾಂಕಿನಿಂದ ಸಾಲ ಪಡೆದಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನನ್ನ ತಂದೆ ಮತ್ತು ಗೋವಿಂದಪ್ಪರವರ ಮಕ್ಕಳ ಮಧ್ಯೆ 1978 ರಿಂದ ಒಟ್ಟು ಕುಟುಂಬ ಅಸ್ತಿತ್ವದಲ್ಲಿ ಇರುವುದಿಲ್ಲ ಎಂದರೆ ಸರಿಯಲ್ಲ. ಹಕ್ಕು ಖುಲಾಸೆ ಪತ್ರ ಬರೆದುಕೊಟ್ಟಿರುವುದನ್ನು ತಪ್ಪಿಸಿಕೊಳ್ಳುವ ಉದ್ದೇಶದಿಂದ ನಾನು ಮತ್ತು ನನ್ನ ತಂದೆ ಷರೀಕಾಗಿ ಈ ದಾವೆ ದಾಖಲು ಮಾಡಿರುತ್ತೇವೆ ಎಂದರೆ ಸರಿಯಲ್ಲ. ಹಕ್ಕು ಖುಲಾಸೆ ಪತ್ರ ಬರೆದುಕೊಟ್ಟ ನಂತರದಲ್ಲಿ ಗೋವಿಂದಪ್ಪ ರವರ ಮಕ್ಕಳುಗಳು ಸದರಿ ಆಸ್ತಿಗಳನ್ನು ಹಂಚಿಕೆ ಮಾಡಿಕೊಂಡು ಸ್ವಾಧೀನಾನುಭವದಲ್ಲಿ ಇರುವುದರಿಂದ ನನ್ನ ತಂದೆಯು ಸದರಿ ಆಸ್ತಿಗಳಲ್ಲಿ ಸ್ವಾಧೀನಾನುಭವದಲ್ಲಿ ಇರುವುದಿಲ್ಲ ಎಂದರೆ ಸರಿಯಲ್ಲ.

ದಾವಾ ಅನುಸೂಚಿ ಸ್ವತ್ತು ಸಂ.3 ಗೋವಿಂದಪ್ಪ ರವರಿಗೆ ಮಂಜೂರಾದ ಜಮೀನಾಗಿದ್ದು, ಅವರ ಮರಣದ ನಂತರದಲ್ಲಿ ಗೋವಿಂದಪ್ಪ ರವರ ಮಕ್ಕಳುಗಳು ಸದರಿ ಆಸ್ತಿಗಳನ್ನು ಹಂಚಿಕೆ ಮಾಡಿಕೊಂಡು ಸ್ವಾಧೀನಾನುಭವದಲ್ಲಿ ಇರುವುದರಿಂದ ನನ್ನ ತಂದೆಯು ಸದರಿ ಆಸ್ತಿಗಳಲ್ಲಿ ಸ್ವಾಧೀನಾನುಭವದಲ್ಲಿ ಇರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಅನುಸೂಚಿ 1 ರಿಂದ 3 ರ ಆಸ್ತಿಗಳ ಮೇಲೆ ನನಗೆ ಯಾವುದೇ ಹಕ್ಕು ಅಧಿಕಾರವಿಲ್ಲದಿದ್ದರೂ ಕೂಡ ಸದರಿ ಆಸ್ತಿಗಳು ಒಟ್ಟು

ಕುಟುಂಬದ ಆಸ್ತಿಗಳು ಎಂದು ಸುಳ್ಳು ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಸುಳ್ಳು ದಾವೆ ಸಲ್ಲಿಸಿರುವ ವಿಚಾರ ತಿಳಿಯುತ್ತದೆ ಎಂಬ ಕಾರಣಕ್ಕಾಗಿ ನನ್ನ ತಂದೆಯವರ ಮೊದಲನೇ ಹೆಂಡತಿ ಮತ್ತು ಮಗಳನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿಯಲ್ಲ.

ನಿ ಪಿ 11 ಯಾವ ವರ್ಷದ ದಾಖಲೆ ಎಂದು ನನಗೆ ಗೊತ್ತಿಲ್ಲ. ನಿ ಪಿ 11 ರ ದಾಖಲೆಯಲ್ಲಿ ನಮೂದು ಇರುವ ಆಸ್ತಿ ಪ್ರಸ್ತುತ ಇದೆ ಎಂದು ತೋರಿಸಲು ಇ-ಖಾತಾ ಎಕ್ಸ್ ಟ್ರ್ಯಾಕ್ಟ್ ಮತ್ತು ಅಸೆಸ್‌ಮೆಂಟ್ ಎಕ್ಸ್ ಟ್ರ್ಯಾಕ್ಟ್ ಹಾಜರುಪಡಿಸಲು ತೊಂದರೆ ಇಲ್ಲ ಎಂದರೆ ಸರಿ. ದಿಃ16.6.1972 ರಲ್ಲಿ ನನ್ನ ಅಜ್ಜ ತಿಮ್ಮಪ್ಪ ಯಾನೆ ತಿಮ್ಮಾನಾಯಕ ರವರು ಶಂಭುಲಿಂಗಪ್ಪ ರವರಿಗೆ ನನ್ನ ತಂದೆಯ ಮದುವೆಯ ಬಾಪ್ತು ಖರ್ಚಿಗಾಗಿ ದಾವಾ ಅನುಸೂಚಿ ಸ್ವತ್ತು 1 ಮತ್ತು 2 ರ ಆಸ್ತಿಗಳನ್ನು ಆಧಾರ ಮಾಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ಆಸ್ತಿಗಳ ಆಧಾರದ ಬಾಪ್ತು ಶಂಭುಲಿಂಗಪ್ಪರವರಿಗೆ ಹಣವನ್ನು ಪಾವತಿ ಮಾಡಿ 2 ನೇ ಪ್ರತಿವಾದಿಯು ಆಸ್ತಿಗಳನ್ನು ಮರಳಿ ಪಡೆದಿರುತ್ತಾರೆ ಎಂದರೆ ಸರಿಯಲ್ಲ. ನನ್ನ ತಂದೆಯು ಒಟ್ಟು ಕುಟುಂಬದ ಆಸ್ತಿಗಳನ್ನು ಮನಸ್ಸೂ ಇಚ್ಛೆ ಆಧಾರ ಮಾಡಲು ಪ್ರಾರಂಭಿಸಿದ್ದರಿಂದ 2 ನೇ ಪ್ರತಿವಾದಿಯು ಹಣವನ್ನು ನೀಡಿ ಹಕ್ಕು ಖುಲಾಸೆ ಪತ್ರವನ್ನು ಬರೆಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಮತ್ತು ನನ್ನ ತಂದೆ ಮತ್ತು ಗೋವಿಂದಪ್ಪ ರವರ ಮಕ್ಕಳ ನಡುವೆ ಒಟ್ಟು ಕುಟುಂಬ ಅಸ್ತಿತ್ವದಲ್ಲಿ ಇಲ್ಲದಿರುವುದರಿಂದ ದಾವಾ ಆಸ್ತಿಗಳಲ್ಲಿ ಪಾಲು ಕೇಳುವ ಪ್ರಶ್ನೆ ಬರುವುದಿಲ್ಲ ಎಂದರೆ ಸರಿಯಲ್ಲ. ತಿಮ್ಮಪ್ಪ ರವರ ಹೆಸರಿಗೆ ಇರುವ ದಾಖಲೆಗಳನ್ನು ಪ್ರಶ್ನಿಸದೇ ಇರುವುದರಿಂದ ಈ ದಾವೆ ದಾಖಲು ಮಾಡಲು ಅರ್ಹರಾಗಿರುವುದಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸ.ಇ.ಎ.ಒ.,

sd/xxx

(ಈರಪ್ಪ ಢವಳೇಶ್ವರ್)
**೨ ನೇ ಹೆ.ಪ್ರಃದಃನ್ಯಾಃದಂ.ರವರು, ಕಡೂರು.**